# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**:10/2025

ಡಬ್ಲ್ಯೂ.ಡಬ್ಲ್ಯೂ-2

**<u>ದಿನಾಂಕ 01.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರ ಸಂಖ್ಯೆ-2 ರವರ ಪರ ಶ್ರೀ.ವಿ.ಎಲ್.ಪಿ. ವಕೀಲರಿಂದಃ**

ನಾನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ಯಾವಾಗ ಕೆಲಸಕ್ಕೆ ಸೇರಿದ್ದೆ ಎಂದರೆ ಸಾಕ್ಷಿ 11.08.2014 ರಲ್ಲಿ ಕೆಲಸಕ್ಕೆ ಸೇರಿದ್ದೆ ಎನ್ನುತ್ತಾರೆ. ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದ್ದೆ. ಯಾವುದೇ ಕಾರ್ಮಿಕರಿಗೆ ಕೆಲಸಕ್ಕೆ ಸೇರುವಾಗ ನೇಮಕಾತಿ ಪತ್ರ ನೀಡುತ್ತಾರೆ ಎಂದರೆ ಸರಿ. ನನಗೆ ವೇತನವನ್ನು ಸರಿಯಾಗಿ ನೀಡುತ್ತಿದ್ದರು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಪಿ.ಎಫ್. ಮತ್ತು ಇ.ಎಸ್.ಐ. 2 ನೇ ಪಕ್ಷಗಾರರ ಸಂಖ್ಯೆ-1 ರವರ ನೀಡುತ್ತಿದ್ದರು. ನನಗೆ ಇಲ್ಲಿಯವರೆಗೂ ವೇತನ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ನಿ.ಡಬ್ಲ್ಯೂ-8 ರ ದಾಖಲೆಯನ್ನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯವರು ನೀಡಿರುತ್ತಾರೆ. ನನಗೆ ಇ-ಪೆಹೆಚಾನ್ ಕಾರ್ಡ್ ಬಗ್ಗೆ ನನಗೆ ಗೊತ್ತಿಲ್ಲ. ನನ್ನನ್ನು ದಿನಾಂಕಃ 15.02.2023 ರಲ್ಲಿ Hitachi ಸಂಸ್ಥೆಗೆ deputation ಮೇಲೆ ವರ್ಗಾವಣೆ ಮಾಡಿದ್ದರು ಎಂದರೆ ಸರಿ, ಆದರೆ ಅಲ್ಲಿ permanent post ಇದ್ದರೂ ಕೂಡ ನಮ್ಮನ್ನು ಅಲ್ಲಿಂದ 12.02.2023 ರಂದು ಕೆಲಸದಿಂದ ತೆಗೆದಿರುತ್ತಾರೆ. ನಿ.ಡಬ್ಲ್ಯೂ-5 ರ ದಾಖಲೆ ಪ್ರಕಾರ ನನ್ನನ್ನು ದಿನಾಂಕಃ06.06.2023 ರಂದು ಕೆಲಸದಿಂದ ತೆಗೆದಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸುಳ್ಳು. ನನ್ನನ್ನು ದಿನಾಂಕಃ06.06.2023 ರಲ್ಲಿ ಕೆಲಸದಿಂದ ತೆಗೆದಿರುತ್ತಾರೆ, ದಿನಾಂಕಃ12.02.2023 ರಲ್ಲಿ ನನ್ನನ್ನು ಕೆಲಸದಿಂದ ತೆಗೆದಿಲ್ಲ ಎಂದರೆ ಸರಿಯಲ್ಲ.

ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ವಜಾಗೊಂಡಿರುವುದಿಲ್ಲ, Hitachi ಸಂಸ್ಥೆಯಲ್ಲಿ ವಜಾಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಿದ್ದ ಮೇಲೆ 2 ನೇ ಪಕ್ಷಗಾರರ ಸಂಖ್ಯೆ-2 ರವರನ್ನು ಈ ಪ್ರಕರಣದಲ್ಲಿ ಏಕೆ ಪಕ್ಷಗಾರರನ್ನಾಗಿ ಸೇರಿಸಿದ್ದೀರ ಎಂದರೆ ಸಾಕ್ಷಿ ಅವರ ಕಡೆಯಿಂದ ವೇತನ ಸಂದಾಯವಾಗುತ್ತಿತ್ತು ಆದ್ದರಿಂದ ಅವರನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎನ್ನುತ್ತಾರೆ. ದಿನಾಂಕಃ 12.02.2023 ರಲ್ಲಿ ನನ್ನನ್ನು ವಜಾಗೊಳಿಸಿಲ್ಲ, ನಾನ್ನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರವನ್ನು ನಮ್ಮ ವಕೀಲರು notary ಮಾಡಿಸಿರುತ್ತಾರೆ. Notary ಆದ ನಂತರ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಡಳಿತ ವರ್ಗದವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**